ಶ್ರೀ ಸಿ.ಟಿ. ರವಿ:– ಪರಿಗಣಿಸದಿದ್ದರೆ ನಿಮ್ಮ ಮನೆಗೇ ಬಂದು ಹಾವು ಬಿಡಿಸುತ್ತೇವೆ.

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಅಧ್ಯಕ್ಷರು ಹೇಳಿದಂತೆ ಇಲ್ಲಿಂದಲೇ ಒಂದು ಸುತ್ತೋಲೆಯನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಇದನ್ನು ತಕ್ಷಣ ಕೊಡಿ ಎಂದು ಹೇಳಿದರೆ ಸಾಕಾಗುತ್ತದೆ.

ಶ್ರೀ ವಿನಯಕುಮಾರ್ ಸೊರಕೆ:– ಕಳುಹಿಸಿಕೊಡುತ್ತೇವೆ.

ಅಧ್ಯಕ್ಷರು:– ಮಾನ್ಯ ಸಚಿವರೆ, ಮೊದಲು ಆ ಕೆಲಸ ಮಾಡಿ. ಪಾಪ ಅವರು ಬಂದು ನಿಲ್ಲುವುದೇ ಕಷ್ಟ. ನಾನು ಎರಡ್ಮೂರು ಕಡೆ ಹಾಕಿಸಿಕೊಟ್ಟಿದ್ದೇನೆ, ಅದಕ್ಕೆ ಈಗ ಬಂದಿದ್ದಾರೆ. ಅವರಿಗೆಲ್ಲರಿಗೂ ಬೇಗ ಮೊದಲು ಕೆಲಸ ಮಾಡಿಕೊಡಬೇಕು.

ಶ್ರೀ ವಿನಯಕುಮಾರ ಸೊರಕೆ:– ಆಯಿತು.

4. ವಿಷಯ: ಯಾದಗಿರಿ ಜಿಲ್ಲೆಯ ಶಹಾಪುರ ಮತಕ್ಷೇತ್ರದ ಬೂದನೂರು ಗ್ರಾಮದಲ್ಲಿ ನಡೆದ ಹಲ್ಲೆ ಬಗ್ಗೆ ಘಟನೆ ನಡೆಯುವ ಮೊದಲು ಸಿ.ಪಿ.ಐ. ರವರಿಗೆ ತಿಳಿಸಿದ್ದರೂ ಕೂಡ ಇದರ ಬಗ್ಗೆ ಕ್ರಮ ಕೈಗೊಳ್ಳದಿರುವ ಬಗ್ಗೆ.

ಶ್ರೀ ಗುರುಪಾಟೀಲ ಶಿರವಾಳ (ಶಹಾಪುರ):– ಮಾನ್ಯ ಅಧ್ಯಕ್ಷರೆ, ಯಾದಗಿರಿ ಜಿಲ್ಲೆಯ ಶಹಾಪುರ ಮತ ಕ್ಷೇತ್ರದ ಬೂದನೂರು ಗ್ರಾಮದಲ್ಲಿ ನಡೆದ ಹಲ್ಲೆ ಬಗ್ಗೆ ಘಟನೆ ನಡೆಯುವ ಮೊದಲು ಸಿ.ಪಿ.ಐ.ರವರಿಗೆ ತಿಳಿಸಿದ್ದರೂ ಕೂಡ ಇದರ ಬಗ್ಗೆ ಕ್ರಮ ಕೈಗೊಳ್ಳದಿರುವ ಬಗ್ಗೆ ಮಾನ್ಯ ಗೃಹಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಸಚಿವರು) (ಮಾನ್ಯ ಗೃಹ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ದಿನಾಂಕ:03–07–2015 ರಂದು ಬೆಳಿಗ್ಗೆ 07.30 ಗಂಟೆ ಸುಮಾರಿಗೆ ಕಾಡಂಗೇರಾದಿಂದ ಬೂದುನೂರು ಕಡೆಗೆ ಹೋಗುವ ರಸ್ತೆಯು ಸಂಜೀವರೆಡ್ಡಿ ಹೊಲದ ಹತ್ತಿರ ತಿರುವಿನಿಂದ ಕೂಡಿದ್ದು, ಅಲ್ಲಿ ಗಿಡ ಜಾಲಿಕಂಟಿಗಳು ಬೆಳೆದಿದ್ದರಿಂದ ಮುಂದಿನ ರಸ್ತೆ ಕಾಣದೇ ರಸ್ತೆ

ಅಪಘಾತಗಳು ಸಂಭವಿಸುವ ಸಾಧ್ಯತೆ ಇದ್ದುದರಿಂದ ಗ್ರಾಮದ ಪ್ರಮುಖರಾದ ಪುತ್ರಪ್ಪ ತಂದೆ ಲಿಂಗಪ್ಪ ಇವರು ಕೆಲಸಗಾರರನ್ನು ಕರೆದುಕೊಂಡು ರಸ್ತೆ ತಿರುವಿನಲ್ಲಿ ಬೆಳೆದ ಜಾಲಿ ಮತ್ತು ಕಲ್ಲುಗಳನ್ನು ತೆಗೆಯಲು ಹೋದಾಗ ಪಕ್ಕದ ಹೊಲದವರಾದ ಶ್ರೀ ಗುರುನಾಥರೆಡ್ಡಿ ಹಾಗೂ ಇತರರು ನಮ್ಮ ಹೊಲದಲ್ಲಿ ಬೆಳೆದ ಗಿಡಕಂಟಿ ಯಾಕೆ ತೆಗೆಯುತ್ತಿರಿ ಅಂತಾ ಜಗಳ ತೆಗೆದಾಗ ಸದರಿ ಗಲಾಟೆಯ ಬಗ್ಗೆ ಗೋಗಿ ಪೊಲೀಸ್ ಠಾಣೆಗೆ ಮಾಹಿತಿ ಬಂದ ಮೇರೆಗೆ ಕೂಡಲೇ ಠಾಣೆಯ ಸಿ.ಹೆಚ್.ಸಿ–100 ಸೊಂದಪ್ಪ ಹಾಗೂ ಸಿಪಿಸಿ–97 ಈಶ್ವರ ರವರು ಘಟನಾ ಸ್ಥಳಕ್ಕೆ ಹೋಗಿ ಗಲಾಟೆ ಮಾಡುತ್ತಿದ್ದ ಎರಡು ಕಡೆಯವರನ್ನು ತಿಳುವಳಿಕೆ ಹೇಳಿ ಸಮಾಧಾನಪಡಿಸಿ ರಸ್ತೆಯ ಪಕ್ಕದಲ್ಲಿ ಕೂಡಿಸಿದ್ದರು. ಆಗ ಶಹಾಪೂರ ಕಡೆಯಿಂದ ಸಂಜೀವರೆಡ್ಡಿ ತಂದೆ ಬೀಮರಾಯ ಉಡೇದ ಇವರು ತಮ್ಮ ಬೊಲೆರೊ ಜೀಪ ನಂ:ಕೆಎ–33 ಎಮ್ 4024 ನ್ನು ಚಲಾಯಿಸಿಕೊಂಡು ವೇಗವಾಗಿ ಕುಳಿತ ಜನರ ಕಡೆಗೆ ಬಂದು ಬೂದುನೂರು ಗ್ರಾಮದ ನಿರ್ಮಲ ಎಂಬವಳಿಗೆ ಹಾಯಿಸಿದ್ದರಿಂದ ಗಾಯಗಳಾಗಿರುತ್ತವೆ. ಇದರಿಂದ ಕೋಪಗೊಂಡ ಎರಡು ಕಡೆಯ ಗುಂಪಿನ ನಡುವೆ ಘರ್ಷಣೆಯಾಗಿ ಎರಡು ಕಡೆಯ ಸುಮಾರು 15–20 ಜನರಿಗೆ ಗಾಯಗಳಾಗಿರುತ್ತವೆ.

ಸದರಿ ಘಟನೆಗೆ ಸಂಬಂಧಿಸಿದಂತೆ ಗೋಗಿ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ. 63/2015 ಕಲಂ. 143, 147, 148, 323, 324, 354, 307, 427, 448, 109, 504, 506 ಸಂ. 149 ಐಪಿಸಿ ಹಾಗೂ ಗುನ್ನೆ ನಂ. 64/15 ಕಲಂ. 143, 147, 148, 323, 324, 354, 308, 504, 506 ಸಂ. 149 ಐಪಿಸಿ ಮತ್ತು 3(1)3(10)3(11) ಎಸ್.ಸಿ/ಎಸ್.ಟಿ ಕಾಯ್ದೆಯಲ್ಲಿ ಗುನ್ನೆ ಪ್ರತಿಗುನ್ನೆಗಳು ದಾಖಲಾಗಿದ್ದು, ತನಿಖೆ ಜಾರಿಯಲ್ಲಿದೆ. ಘಟನಾ ಸ್ಥಳಕ್ಕೆ ಕೂಡಲೇ ಭೇಟಿ ನೀಡದೇ ವಿಳಂಬವಾಗಿ ಘಟನಾ ಸ್ಥಳಕ್ಕೆ ಹೋಗಿ ಪರಿಸ್ಥಿತಿಯನ್ನು ನಿಯಂತ್ರಿಸುವಲ್ಲಿ ವಿಫಲವಾದ ಶಹಾಪೂರ ವೃತ್ತ ನಿರೀಕ್ಷಕರು ಶ್ರೀ ಸಂತೋಷ ಬನ್ನಟ್ಟಿ ಇವರಿಗೆ ದಿನಾಂಕ: 03–07–2015 ರಂದು ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತಿನ ನಡಾವಳಿಗಳು) ನಿಯಮಾವಳಿ 7ರ ಅಡಿಯಲ್ಲಿ ದೋಷಾರೋಪಣಾ ಪತ್ರವನ್ನು ಹೊರಡಿಸಲಾಗಿದೆ. ಸದರಿ

ಬೂದನೂರು ಗ್ರಾಮದಲ್ಲಿ ಪೋಲಿಸ್ ಪಿಕೆಟಿಂಗ್ ನೇಮಿಸಿದ್ದು ಸದ್ಯದ ಪರಿಸ್ಥಿತಿಯು ಶಾಂತತೆಯಿಂದ ಕೂಡಿರುತ್ತದೆ.

ಶ್ರೀ ಗುರುಪಾಟೀಲ್ ಶಿರವಾಳ (ಶಹಾಪುರ):– ಮಾನ್ಯ ಅಧ್ಯಕ್ಷರೆ, ಬೂದನೂರು ಗ್ರಾಮದಲ್ಲಿ ಶುಕ್ರವಾರ 3ನೇ ತಾರೀಖಿನ ದಿವಸ ಒಂದೇ ಕುಟುಂಬದ 12 ಜನರ ಮೇಲೆ ಮಾರಣಾಂತಿಕ ಹಲ್ಲೆಯಾಗಬಹುದೆಂದು ಅರಿತು ನಾನು ಸರ್ಕಲ್ ಇನ್ಸ್‌ಪೆಕ್ಟರ್‌ರವರಿಗೆ ದೂರವಾಣಿ ಮೂಲಕ ಮಾತನಾಡಿ ಈ ತರಹ ಹಲ್ಲೆಯಾಗುವಂಥ ಪರಿಸ್ಥಿತಿಯಿದೆ, ನೀವು ದಯಮಾಡಿ ತತ್‌ಕ್ಷಣದಲ್ಲಿ ಅಲ್ಲಿಗೆ ಹೋಗಿ ಇದನ್ನು ತಡೆಯಬೇಕೆಂದು ಅವರಿಗೆ ನಾನು ಹೇಳಿದ್ದೆ. ಆದರೆ ಆ ಸರ್ಕಲ್ ಇನ್ಸ್‌ಪೆಕ್ಟರ್‌ರವರು ಇದರಲ್ಲಿ ಲೋಪವೆಸಗಿದ್ದಾರೆಂದು ಹೇಳಿ ಈ ಉತ್ತರದಲ್ಲಿ ಅವರು ಕೊಟ್ಟಿದ್ದಾರೆ. ನಿಯಮಾವಳಿ 7 ರಡಿಯಲ್ಲಿ ದೋಷಾರೋಪಣಾ ಪತ್ರವನ್ನು ಹೊರಡಿಸಲಾಗಿದೆಯೆಂದು ಹೇಳಿದ್ದಾರೆ.

ಅಧ್ಯಕ್ಷರು:– ಸರಿಯಾಗಿ ಮಾಡಿದ್ದಾರಲ್ಲ ಬಿಡಿ.

ಶ್ರೀ ಗುರುಪಾಟೀಲ್ ಶಿರವಾಳ:– ಅವರ ಮೇಲೆ ಕ್ರಮ ಜರುಗಿಸಬೇಕು. ಈಗಾಗಲೇ 5 ದಿವಸ ಕಳೆದಿದ್ದರೂ ಕೂಡ ಇವತ್ತಿನವರೆಗೆ ಯಾರನ್ನೂ ಅರೆಸ್ಟ್ ಮಾಡಿಲ್ಲ. ಅರೆಸ್ಟ್ ಮಾಡಬೇಕು. ಅವರನ್ನು ಸಸ್ಪೆಂಡ್ ಮಾಡಬೇಕು. ಬಹಳ ಗಂಭೀರವಾದಂಥ ರೀತಿಯಲ್ಲಿ ಹಲ್ಲೆಯಾಗಿದೆ.

ಅಧ್ಯಕ್ಷರು:– ಮಾನ್ಯ ಸಚಿವರೆ, ಮಾಡ್ರಿ, ಅವರನ್ನು ಸಸ್ಪೆಂಡ್ ಮಾಡಿ, ಡಿಸ್ಮಿಸ್ ಮಾಡಿ, ಬೇಗ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಗೃಹ ಸಚವರ ಪರವಾಗಿ):– ಅಲ್ಲಿ ಈಗ ಪರಿಸ್ಥಿತಿ ಕಂಟ್ರೋಲ್‌ನಲ್ಲಿದೆ, ಯಾವ ತೊಂದರೆಯಿಲ್ಲವೆಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ ಅದಕ್ಕೆ ಯಾವುದೇ ರೀತಿಯಲ್ಲಿ action ಆಗಿಲ್ಲವೆನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದರ ಮೇಲೆ ಕ್ರಮವಹಿಸುತ್ತೇವೆ.

ಅಧ್ಯಕ್ಷರು:– ಅದು ಹಾಗಲ್ಲ, ಸಿ.ಪಿ.ಐ. ರವರು respond ಮಾಡಿಲ್ಲವೆಂದು ಅವರು ಹೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಖಂಡಿತ ಇದರ ಬಗ್ಗೆ ಗಮನ ಹರಿಸುತ್ತೇವೆ.

ಶ್ರೀ ಗುರುಪಾಟೀಲ ಶಿರವಾಳ:– ಖಂಡಿತ ಕ್ರಮವಾಗಬೇಕು ಸಭಾಧ್ಯಕ್ಷರೆ, ಏಕೆಂದರೆ ಅಲ್ಲಿ ಅವರ ಮೇಲೆ ಮಾರಣಾಂತಿಕ ಹಲ್ಲೆಯಾಗಿದೆ. ಆ ಊರಿನಲ್ಲಿ ಭಯದ ವಾತಾವರಣವಿದೆ. ಜನರು ವಾಸ ಮಾಡುವುದಕ್ಕೇ ಆಗದಂಥ ಗಂಭೀರ ಪರಿಸ್ಥಿತಿಯಿದೆ.

ಶ್ರೀ ಟಿ.ಬಿ. ಜಯಚಂದ್ರ:– ಕ್ರಮ ತೆಗೆದುಕೊಳ್ಳುತ್ತೇವೆ.

5. ವಿಷಯ: ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಕೃಷಿ ಅನವುಗಾರರ ಸೇವೆ ಸಲ್ಲಿಸುತ್ತಿರುವವರ ಸಂಖ್ಯೆಯನ್ನು ಕಡಿಮೆ ಮಾಡುತ್ತಿದ್ದಾರೆ. ಈಗ ಇರುವವರೆಲ್ಲರನ್ನು ಯಲ್ಲಿ ಮುಂದುವರೆಸುವ ಬಗ್ಗೆ ಮನವಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಕೃಷಿ ಅನವುಗಾರರ ಸೇವೆ ಸಲ್ಲಿಸುತ್ತಿರುವವರ ಸಂಖ್ಯೆಯನ್ನು ಕಡಿಮೆ ಮಾಡುತ್ತಿದ್ದು, ಈಗ ಇರುವವರನ್ನು ಮುಂದುವರೆಸುವ ಬಗ್ಗೆ ಮಾನ್ಯ ಕೃಷಿ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ಇಲಾಖೆ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಕೃಷಿ ಅನವುಗಾರರನ್ನು ನಾವು ತೆಗೆದುಕೊಂಡಿದ್ದೂ ಭೂಚೇತನ ಕಾರ್ಯಕ್ರಮದಲ್ಲಿ. ಹೆಚ್ಚಿಗೆ ಈ ಲಘು ಪೋಷಕಾಂಶಗಳನ್ನು ಜನರಿಗೆ ಪ್ರಚಾರ ಕೊಡಬೇಕೆನ್ನುವ ಉದ್ದೇಶಕ್ಕೆ ಇವರನ್ನು ತೆಗೆದುಕೊಂಡಿದ್ದು. ಈಗ ಅದು ಸಾಕಷ್ಟು ಪ್ರಚಾರವಾಗಿದೆ. ಅವರನ್ನು ನಾವು ಒಂದು ಸೀಮಿತ ಅವಧಿಗೆ ತೆಗೆದುಕೊಂಡಿದ್ದು. So, ಈಗ ಅದು ಸ್ವಲ್ಪ ಮಟ್ಟಿಗೆ ಪ್ರಚಾರವಾಗಿರುವುದರಿಂದ ಸಾಕಷ್ಟು ರೈತರು ಅದನ್ನು ಅಳವಡಿಕೆ ಮಾಡಿಕೊಳ್ಳುತ್ತಿರುವುದರಿಂದ ಅವರನ್ನು ನಾವು ಈಗ ಅವಶ್ಯಕತೆಗೆ ತಕ್ಕ ಹಾಗೆ ತೆಗೆದುಕೊಳ್ಳಬೇಕಾಗುತ್ತದೆ.